ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 103-110
©IIMRD, Mysuru
IIMRD JOURNALS
www.iimrd.com

# ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್ ಕಾದಂಬರಿಗಳಲ್ಲಿ ವಾಸ್ತವತಾವಾದದ ನೆಲೆಗಳು

ಶ್ವೇತ.ಜೆ[1]

**ಪೀಠಿಕೆ**

ವಾಸ್ತವತಾವಾದ ಅಥವಾ ವಾಸ್ತವವಾದ ಎಂಬ ಪರಿಕಲ್ಪನೆಯು ಸಾಹಿತ್ಯ ಮತ್ತು ವಿಮರ್ಶೆಗಳ ಸಂದರ್ಭದಲ್ಲಿ ಇಂಗ್ಲೀಷಿನ 'ರಿಯಲಿಜಂ' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲಾಗುತ್ತದೆ. ವಾಸ್ತವತಾವಾದದ ಪರಿಕಲ್ಪನೆಯು ಪ್ರಾದೇಶಿಕವಾಗಿ ಬದಲಾದರೂ ಸಾಮಾಜಿಕ ಕಾಳಜಿಯುಳ್ಳದ್ದಾಗಿದೆ. ಈ ಪರಿಕಲ್ಪನೆಯಲ್ಲಿ ಸಮಾಜದಲ್ಲಿ ನಡೆಯುವ ಕ್ರಿಯೆಗಳು ಮುಖ್ಯವಾಗಿರುತ್ತದೆ. ಕಾಲದಿಂದ ಕಾಲಕ್ಕೆ ವಾಸ್ತವತಾವಾದ ಸ್ವರೂಪ ಬದಲಾದಂತೆ ವ್ಯಕ್ತಿಯ ಆಂತರಿಕ ಮನಸ್ಥಿತಿಗಳು ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಸಿಲುಕಿ ತಮ್ಮ ಬದುಕನ್ನು ಸಂಘರ್ಷಗಳಿಗೆ ಸಿಲುಕಿಸಿಕೊಳ್ಳುತ್ತಾರೆ ಎಂಬುದನ್ನು ರಷ್ಯನ್ ಬರಹಗಾರರು ತಮ್ಮ ಸೃಜನಶೀಲ ಕೃತಿಗಳಲ್ಲಿ ತಿಳಿಸಿದ್ದಾರೆ. 19ನೇ ಶತಮಾನದಲ್ಲಿ ಫ್ರೆಂಚ್ ಮತ್ತು ರಷ್ಯನ್ ಸಾಹಿತ್ಯದಲ್ಲಿ ವಾಸ್ತವತಾವಾದವು ರೋಮ್ಯಾಂಟಿಕ್ ವಾದಕ್ಕೆ ಪ್ರತಿಕ್ರಿಯೆಯಾಗಿ, ಪ್ರಶ್ನಿಸುವ ಕ್ರಮವಾಗಿ ಬಂದಿತು. ಇಂಗ್ಲೆಂಡ್ ಮತ್ತು ಯೂರೋಪ್‌ಗಳಲ್ಲಿ ಪ್ರಚಲಿತವಾಗಿದ್ದ ವಾಸ್ತವತಾವಾದಿ ಚಳುವಳಿಯು ಕ್ರಮೇಣವಾಗಿ ರಷ್ಯನ್ ಸಾಹಿತ್ಯದಲ್ಲಿ ಕಂಡುಬಂದಿತು. ಕೃಷಿ ಪ್ರಧಾನವಾದ ಸಮಾಜವು ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ರಷ್ಯನ್ ಸಮಾಜವನ್ನು ಆಕ್ರಮಿಸಿಕೊಂಡಿತು. ಆದುದರಿಂದ ಸಾಮಾಜಿಕ ಸಂಸ್ಥೆಗಳು, ಮಾನವ ಸಂಬಂಧಗಳು ಮತ್ತು ವೈಯಕ್ತಿಕ ಜೀವನದ ಏರಿಳಿತಗಳು ವಾಸ್ತವತಾವಾದದ ಹಿನ್ನೆಲೆಯಲ್ಲಿ ರಷ್ಯನ್ ಕಾದಂಬರಿಗಳು ಚಿತ್ರಣಗೊಂಡಿವೆ.

ಸಮಾಜದಲ್ಲಿದ್ದ ಜಮೀನ್ದಾರಿ ಪದ್ಧತಿಯು ಬಂಡವಾಳಶಾಹೀ ವ್ಯವಸ್ಥೆಗೆ ಬದಲಾಗುವ ಸಂದರ್ಭದಲ್ಲಿ ಕಾದಂಬರಿ ಪ್ರಕಾರವು ರೂಪಗೊಂಡಿತು. ಈ ಸಾಹಿತ್ಯ ಪ್ರಕಾರದಲ್ಲಿ ವಾಸ್ತವತಾವಾದದ ಪರಿಕಲ್ಪನೆ ಸಮಾಜ ಕನ್ನಡಿಯಂತೆ ಹಲವು ಸಾಮಾಜಿಕ ವಿಚಾರಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ರಷ್ಯನ್ ಬರಹಗಾರರ ಸಾಹಿತ್ಯದಲ್ಲಿ ಕಂಡುಬರುವ ಅಂಶಗಳೆಂದರೆ ರೈತ ಮತ್ತು ಭೂಮಾಲೀಕರ ನಡುವಿನ ಸಂಬಂಧ, ಅಧಿಕಾರಿಗಳ ಕ್ರೌರ್ಯತೆ, ಜೀತದಾಳಿನ ಪರಿಸ್ಥಿತಿ, ಉದಾರ ಧೋರಣೆಯ ವಿಚಾರಗಳು ಹೀಗೆ ತಮ್ಮ ಬರವಣಿಗೆಯಲ್ಲಿ ಇರುವ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಂಗತಿಗಳನ್ನು ಪಾತ್ರ, ಘಟನೆಗಳ ಮೂಲಕ ವ್ಯಕ್ತಪಡಿಸಿದ್ದಾರೆ. ರಷ್ಯನ್ ಬರಹಗಾರರ ಕಾದಂಬರಿಗಳಲ್ಲಿ ವಾಸ್ತವತೆಯ ಪರಿಕಲ್ಪನೆಯು ಹೇಗೆ ವ್ಯಕ್ತವಾಗಿದೆ ಎಂದು ತಿಳಿದುಕೊಳ್ಳುವುದರ ಜೊತೆಗೆ 19ನೇ ಶತಮಾನದ ರಷ್ಯನ್ ಸಾಹಿತ್ಯದಲ್ಲಿ ಯಾವ ರೀತಿಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಸ್ಯೆಗಳು ಇದ್ದವು ಎಂಬುದನ್ನು ಗುರುತಿಸಲಾಗುತ್ತದೆ. ಇವುಗಳ ಹಿನ್ನೆಲೆಯಲ್ಲಿ ಬರಹಗಾರರು ಸಮಕಾಲೀನ ಸಂದರ್ಭದವರಾಗಿದ್ದರೂ ಒಂದೇ ವಸ್ತುವನ್ನು ಹೇಗೆ ಭಿನ್ನ ನೆಲೆಯಲ್ಲಿ ಗ್ರಹಿಸಿ ತಮ್ಮದೇ ಆದ ಶೈಲಿಯಲ್ಲಿ ಪ್ರಸ್ತುತ ಪಡಿಸಿದರು ಎಂದು ತಿಳಿಯಲಾಗುತ್ತದೆ.

---

[1] *ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು.*

ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್ ಕಾದಂಬರಿಗಳಲ್ಲಿ ವಾಸ್ತವತೆಯ ನೆಲೆಯು ರಷ್ಯನ್ ಸಮಾಜದ ಕನ್ನಡಿಯಂತೆ ಕಂಡುಬರುತ್ತದೆ.

ವಾಸ್ತವತಾವಾದದ ಕಾದಂಬರಿಯಲ್ಲಿ ಪ್ರಮುಖವಾಗಿ ಮೂರು ಅಂಶಗಳು ಕಂಡು ಬರುತ್ತವೆ. ಅವುಗಳೆಂದರೆ ಸಾಮಾಜಿಕ ಸಮಸ್ಯೆಗಳ ಕುರಿತ ವಿಚಾರ, ಮನುಷ್ಯ ಸಂಬಂಧಗಳ ಸ್ವರೂಪ ಮತ್ತು ಬದಲಾವಣೆಗೊಂಡ ಸಮಾಜದ ಸ್ಥಿತಿಗತಿ.

19ನೇ ಶತಮಾನದಲ್ಲಿ ಕಾಣಿಸಿಕೊಂಡ ವಾಸ್ತವತಾವಾದವು ಮೊದಲು ಕಾಣಿಸಿಕೊಂಡಿದ್ದು ಕಾದಂಬರಿಯಲ್ಲಿ. ಈ ಕಾದಂಬರಿಗಳ ವಸ್ತು ವಿಷಯವನ್ನು ಕುರಿತಂತೆ ಬರಹಗಾರರು ತಮ್ಮ ಕೃತಿಗಳಲ್ಲಿ ಪ್ರಾದೇಶಿಕತೆಯ ಮತ್ತು ಆಯಾ ಭಾಷೆಯ ಶೈಲಿಯನ್ನು ಕಟ್ಟಿಕೊಟ್ಟಿದ್ದರು. ಇಂತಹ ವಾಸ್ತವತಾವಾದಿ ಕಾದಂಬರಿಗಳಲ್ಲಿ ಕಲ್ಪನೆಗಳಿಗೆ ಆದ್ಯತೆ ನೀಡದೆ ಸಮಾಜದ ಬದುಕಿನ ಚಿತ್ರಣವನ್ನು ಯಥಾವತ್ತಾಗಿ ಬಿಂಬಿಸಿದ್ದಾರೆ. ವಾಸ್ತವತಾವಾದವು ಮುಖ್ಯವಾಗಿ ಮನುಷ್ಯನ ಗ್ರಹಿಕೆ ಮತ್ತು ಅಭಿವ್ಯಕ್ತಿಯ ವಿಧಾನಗಳಲ್ಲಿ ಬದಲಾದ ಸ್ಥಿತಿಯನ್ನು ರಷ್ಯನ್ ಕಾದಂಬರಿಗಳ ಪಾತ್ರಗಳಲ್ಲಿ ಕಾಣಬಹುದು. ರಷ್ಯನ್ ಸಮಾಜದಲ್ಲಿದ್ದಂತಹ ವಾಸ್ತವತಾವಾದದ ಪರಿಕಲ್ಪನೆಯು ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್‌ರವರ ಬರವಣಿಗೆಯ ಮಾದರಿಯಾಗಿತ್ತು. ಯೂರೋಪಿನ ಕೈಗಾರಿಕರಣದಿಂದ ಆಗಮನವಾದ ಆಧುನಿಕತೆಯು ಕಾರ್ಮಿಕ ವರ್ಗದ ಮೇಲೆ ಪರಿಣಾಮ ಬೀರಿದಾಗ ಹೋರಾಟಗಳು ಪ್ರಾರಂಭವಾದವು. ರಷ್ಯನ್ ಸಮಾಜದಲ್ಲಿದ್ದಂತಹ ವರ್ಗ ಸಮಸ್ಯೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ವಾಸ್ತವತಾವಾದವು ರೂಪುಗೊಂಡಿತು. ರಷ್ಯನ್ ಬರಹಗಾರರ ಮತ್ತು ಚಿಂತಕರ ನಿಲುವುಗಳು ರಷ್ಯನ್ ಸಮಾಜದ ಸಮಸ್ಯೆಗಳನ್ನು ಕುರಿತದ್ದು. ಈ ಹಿನ್ನೆಲೆಯಿಂದ ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್‌ರವರ ಸೃಜನಶೀಲ ಕೃತಿಗಳಲ್ಲಿ ವ್ಯಕ್ತವಾಗುವ ರಷ್ಯನ್ ಸಮಾಜದ ವಾಸ್ತವತೆಯ ಚಿತ್ರಣವನ್ನು ಇವರ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ.

ವಾಸ್ತವತಾವಾದದ ಸ್ವರೂಪವು ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್‌ರವರ ಕಾದಂಬರಿಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ವ್ಯಕ್ತಿನಿಷ್ಠತೆಗಿಂತ ವಸ್ತುನಿಷ್ಠತೆಯು ಮುಖ್ಯವಾಗಿರುತ್ತದೆ. ಆದುದರಿಂದ ವ್ಯಕ್ತಿ ಮತ್ತು ಸಮಾಜ ಮುಖಾಮುಖಿಗಳ ಸಂದರ್ಭದಲ್ಲಿ ಉಂಟಾದ ಸಂಘರ್ಷಗಳನ್ನು ತಿಳಿಯಲಾಗುತ್ತದೆ. ವಾಸ್ತವತಾವಾದವು ಯೂರೋಪಿನಲ್ಲಿ ಪ್ರಾರಂಭದ ಹಂತದಲ್ಲಿ ಒಂದು ವೈಚಾರಿಕ ಕಲ್ಪನೆಯಾಗಿ ಮಾತ್ರ ಇದ್ದು, ತದನಂತರ ಆಧುನಿಕತೆಯ ಬೆಳವಣಿಗೆಯ ಪ್ರಭಾವದಿಂದ ಮನುಷ್ಯನ ಮೇಲೆ ಉಂಟಾದ ವಾಸ್ತವತಾವಾದ ಪರಿಣಾಮವು ಎದುರಾದಂತೆ ಇದರ ಬಗೆಗೆ ಗ್ರಹಿಸುವ, ವಿಶ್ಲೇಷಣೆಗೆ ಒಳಪಡಿಸುವ ದೃಷ್ಟಿಕೋನವು ಬದಲಾಗತೊಡಗಿತು. ಕೈಗಾರಿಕಾ ಕ್ರಾಂತಿಯ ನಂತರ ಯೂರೋಪಿನ ವಾಸ್ತವತಾವಾದವು ಬದಲಾಗತೊಡಗಿದಂತೆ ರಷ್ಯದ ಮೇಲೂ ಪ್ರಭಾವ ಬೀರಿತು.

ರಷ್ಯನ್ ಬರಹಗಾರರು ತಮ್ಮ ಕೃತಿಗಳಲ್ಲಿ ವರ್ಗ ಕಲ್ಪನೆ, ಖಾಸಗಿ ಮತ್ತು ಸಾರ್ವಜನಿಕ ಜೀವನದಲ್ಲಿರುವ ಸಂಬಂಧ, ಗಂಡು ಹೆಣ್ಣು ಸಂಬಂಧ, ಖಾಸಗಿ ಲೋಕದ ಶೋಧನೆ, ಬದಲಾಗುತ್ತಿರುವ ರಷ್ಯನ್ ಸಮಾಜದ ಚಿತ್ರಣವನ್ನು ತಮ್ಮ ಸೃಜನಶೀಲ ಕೃತಿಗಳ ಮೂಲಕ ತಿಳಿಸಿದ್ದಾರೆ. ರಷ್ಯನ್ ಸಮಾಜ ಮತ್ತು ಸಾಹಿತ್ಯದಲ್ಲಿ ವಾಸ್ತವತಾ ಮಾರ್ಗವು ಮಹತ್ವವನ್ನು ಪಡೆದಿತ್ತು. ಯೂರೋಪಿನ ಸಮಾಜದಲ್ಲಿ ಉಂಟಾದ ಬದಲಾವಣೆ, ಕೈಗಾರಿಕೀಕರಣ, ಉತ್ಪಾದನೆಯಲ್ಲಿನ ಹೆಚ್ಚಳ, ಮಾರುಕಟ್ಟೆಯ ವಿಸ್ತರಣೆ,

ಬೂರ್ಜ್ವಾ ವರ್ಗಗಳ ಉದಯ, ಹೊಸದಾಗಿ ಸೃಷ್ಟಿಯಾದ ಆಳುವ ವರ್ಗ ಹೀಗೆ ವಾಸ್ತವವಾದದ ಪರಿಕಲ್ಪನೆಯು ಕ್ರಮೇಣವಾಗಿ ರಷ್ಯನ್ ಸಮಾಜದಲ್ಲಿ 19ನೇ ಶತಮಾನದಲ್ಲಿ ರಷ್ಯನ್ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ಲುಕಾಕ್ಸ್ ಪ್ರಕಾರ 'ವಾಸ್ತವತಾವಾದವೇ ಸಾಹಿತ್ಯವನ್ನು ಗುರುತಿಸಲು ಇರುವ ಪ್ರಮುಖ ಮಾನದಂಡವಾಗಿದೆ. ಕೃತಿಯ ಪಾತ್ರಗಳು ಮತ್ತು ಸನ್ನಿವೇಶಗಳಲ್ಲಿ ಗುರುತಿಸಬಹುದು. ಲೇಖಕನ ರಾಜಕೀಯ ನಿಲುವು ಅವನ ಬರವಣಿಗೆಯ ವಿಧಾನದಲ್ಲಿ ಅಭಿವ್ಯಕ್ತಿಯಾಗುತ್ತದೆ'.[1] ಹೀಗೆ ವಾಸ್ತವತಾವಾದವು ಪಾಶ್ಚಾತ್ಯ ಸಾಹಿತ್ಯ, ಯೂರೋಪ್ ಕಾದಂಬರಿಗಳ ಹಿನ್ನೆಲೆಯಲ್ಲಿ ವಾಸ್ತವತಾವಾದದ ಪರಿಕಲ್ಪನೆಯು ರೂಪಗೊಂಡಿತು. ಕೈಗಾರಿಕಾ ಕ್ರಾಂತಿಯು ಸಮಾಜ ಮತ್ತು ವ್ಯಕ್ತಿಯ ಬದುಕಿನಲ್ಲಿ ಹೊಸ ಬದಲಾವಣೆಯನ್ನು ಸೃಷ್ಟಿಸುವ ಜೊತೆಗೆ ಸಂಘರ್ಷಗಳಿಗೆ ಒಳಪಡಿಸಿತು. ಏಕೆಂದರೆ ಮನುಷ್ಯನ ಗ್ರಹಿಕೆ ಮತ್ತು ಅಭಿವ್ಯಕ್ತಿಯ ವಿಧಾನದಲ್ಲಿ ಬದಲಾವಣೆಯನ್ನು ಮೂಡಿಸಿತು. ಆದುದರಿಂದ ಎಂಗೆಲ್ಸ್ ಹೇಳುವಂತೆ "ಮಾದರಿ ವರ್ಗಗಳ ಮಾದರಿ ಪಾತ್ರಗಳನ್ನು ಸೃಷ್ಟಿಸುವ ಮೂಲಕ ವಾಸ್ತವತಾವಾದೀ ಕಾದಂಬರಿಕಾರರು ಒಂದು ಸಮಾಜದ ಪ್ರತಿಬಿಂಬವನ್ನೇ ನಮ್ಮ ಮುಂದಿಡುತ್ತಾರೆ".[2] ಆದ್ದರಿಂದ ರಷ್ಯನ್ ವಾಸ್ತವತಾವಾದಿ ಕಾದಂಬರಿಗಳಲ್ಲಿ ಮನಸ್ಸಿನಲ್ಲಿ ಉಂಟಾಗುವ ದ್ವಂದ್ವಗಳಿಗೂ ಮತ್ತು ಸಾಮಾಜಿಕ ಸ್ಥಿತಿಗತಿಗಳಿಗೂ ಇರುವ ಅಂತರ್ ಸಂಬಂಧವು ವ್ಯಕ್ತಗೊಳ್ಳುತ್ತದೆ.

ರಷ್ಯನ್ ಸಾಹಿತ್ಯ ವಾಸ್ತವತಾವಾದವು ಫ್ರಾನ್ಸ್‌ನ ರಮ್ಯವಾದಕ್ಕೆ ಪ್ರತಿಯಾಗಿ ರೂಪಗೊಂಡಿತು. ರಷ್ಯನ್ ಸಾಹಿತ್ಯದಲ್ಲಿ ಸಾಮಾಜಿಕ ಅಂಶ, ವರ್ಗ ಸಂಬಂಧ, ಗಂಡು–ಹೆಣ್ಣಿನ ಸಂಬಂಧವು ಕುರಿತಂತೆ ರಷ್ಯನ್ ಬರಹಗಾರರಾದ ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್‌ರವರ ಸೃಜನಶೀಲ ಕೃತಿಗಳಲ್ಲಿ ತಮ್ಮ ಸಮಾಜದ ವಾಸ್ತವಿಕತೆಯನ್ನು ಭಿನ್ನ ದೃಷ್ಟಿಕೋನಗಳ ಮುಖಾಂತರ ಪ್ರತಿಪಾದಿಸಿದ್ದಾರೆ. ರಷ್ಯನ್ ಸಮಾಜದಲ್ಲಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಚಾರಗಳ ವಸ್ತುವಿನಲ್ಲಿ ಬಾಹ್ಯ ಮತ್ತು ಆಂತರಿಕ ವಿಚಾರಗಳ ಶೋಧನೆಯು ಕಂಡುಬರುತ್ತದೆ. "ಶೋಧನೆ" ಎಂಬುದು ಬದುಕನ್ನು ತಿರುವುಗಳ ಕಡೆಗೆ ಕರೆದೊಯ್ಯುತ್ತದೆ. ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್ ಬರವಣಿಗೆಯಲ್ಲಿ ಬದುಕಿನ ತೀವ್ರತೆ, ಯೂರೋಪಿನ ಕೈಗಾರಿಕರಣದಿಂದ ಉಂಟಾದ ರಷ್ಯದ ಆಧುನಿಕತೆಯ ಪ್ರಭಾವ, ಪ್ರತಿಕ್ರಿಯೆ, ನಿರಂಕುಶ ಪ್ರಭುತ್ವ, ಶಿಕ್ಷೆ, ಪ್ರಾಯಶ್ಚಿತ ಹೀಗೆ ಒಂದಕ್ಕೊಂದು ಕ್ರಿಯೆಗಳು ಕಂಡುಬರುವುದು. ಇವರಿಬ್ಬರು "ರಷ್ಯವೇ ಇವರು, ಇವರು ರಷ್ಯರು" ಎನ್ನುವ ಹಾಗೆ ಇವರ ಕೃತಿಗಳು ಭಿನ್ನವಾಗಿರುವುದು. ದಾಸ್ತೊಯೆವ್‌ಸ್ಕಿಯವರ ಕಾದಂಬರಿಯನ್ನು ವ್ಯಕ್ತಿಯ ಅಂತರಂಗದ ಶೋಧನೆಯ ಸಂದರ್ಭದಲ್ಲಿ ಗಮನಿಸಿದಾಗ ಆತ್ಮಪರಿಶುದ್ಧತೆಗಾಗಿ ಪರಿತಪಿಸುವ ಬಗೆಯು ಕಂಡುಬರುತ್ತದೆ.

ಉದಾಹರಣೆಗೆ: ದಾಸ್ತೊಯೆವ್‌ಸ್ಕಿಯ "ಅಪರಾಧ ಮತ್ತು ಶಿಕ್ಷೆ" (ಕ್ರೈಮ್ ಅಂಡ್ ಪನೀಷ್‌ಮೆಂಟ್) ಕಾದಂಬರಿಯಲ್ಲಿ ಸೈಬೀರಿಯಾದಲ್ಲಿ ವಿಧಿಸುವ ಕಠಿಣ ಶಿಕ್ಷೆ ಮತ್ತು ರಷ್ಯನ್ ಚಕ್ರವರ್ತಿಯ ಆಳ್ವಿಕೆ, ತಮ್ಮ ಸ್ವ–ಅನುಭವದ ವಿಚಾರಗಳನ್ನು ತಿಳಿಸಿದ ಬರಹಗಾರ. "ಅಪರಾಧ ಮತ್ತು ಶಿಕ್ಷೆ" ಕೃತಿಯಲ್ಲಿ ರಾಸ್ಕೋಲ್ ನಿಕೋವ್ ಕೇಂದ್ರ ವ್ಯಕ್ತಿ. ಪೀಟರ್‌ಬರ್ಗ್ಸ್‌ನಲ್ಲಿ ಈತ ವಿದ್ಯಾರ್ಥಿಯಾಗಿದ್ದು, ಪ್ರಾಮಾಣಿಕವಾಗಿ ತನ್ನ ಬದುಕನ್ನು ಕಟ್ಟಿಕೊಳ್ಳಲು ಇಚ್ಛಿಸಿದವನು. ಆದರೆ ಈತನ ಸಾಮಾಜಿಕ ಪರಿಸ್ಥಿತಿಯು ಉತ್ತಮವಾಗಿರುವುದಿಲ್ಲ. ಈತ ಪ್ರಭುತ್ವಕ್ಕೆ ವಿರೋಧವಾಗಿ ವರ್ತಿಸಿರುವನು ಎಂಬುದಾಗಿ ಸೆರೆಮನೆಗೆ ಹಾಕುವ ಶಿಕ್ಷೆಯನ್ನು ವಿಧಿಸಲಾಗಿತ್ತು. ನಂತರ ಸೈಬಿರಿಯಾದ ಸೆರೆಮನೆ ವಾಸ, ನಂತರ ಬಿಡುಗಡೆ, ಬಡ

ಕುಟುಂಬದವನಾದ ರಾಸ್ಕೋಲ್ ನಿಕೋವ್ ತನ್ನ ತಾಯಿ ಹೊಲಿಗೆ ಹಾಕಿ ಜೀವನ ಮಾಡುವ ಮತ್ತು ತಂಗಿ ಡೌನಿಯು ತನ್ನ ಅಣ್ಣನಿಗಾಗಿ ತೆಗೆದುಕೊಳ್ಳುವ ನಿರ್ಧಾರದಿಂದ ಬೇಸತ್ತ ಈತ ಶ್ರೀಮಂತ ಮುದುಕಿಯನ್ನು ಕೊಲೆ ಮಾಡಿ, ಪಾರಾದ ನಂತರ ಜ್ವರದಿಂದ ನರಳುತ್ತ ಪಾಪ ಪ್ರಜ್ಞೆಯಿಂದ ಚಿಂತನೆಗೆ ಒಳಗಾಗುತ್ತಾನೆ. ಇಲ್ಲಿ ಬಾಹ್ಯ ವಿವರಗಳಿಗಿಂತ ಆಂತರಿಕವಾಗಿ ಮನಸ್ಸಿನಲ್ಲಿ ನಡೆಯುವ ಗೊಂದಲಗಳನ್ನು ಕಾಣಬಹುದಾಗಿದೆ. ಅಲ್ಲದೇ ದಾಸ್ತೊಯೆವ್‌ಸ್ಕಿಯವರ ಸೃಜನಶೀಲ ಕೃತಿಗಳಲ್ಲಿ ವ್ಯಕ್ತಿಯ ಆಂತರಿಕ ಶೋಧನೆಯು ಹೆಚ್ಚಾಗಿ ಕಂಡುಬರುತ್ತದೆ. ಏಕೆಂದರೆ ರಷ್ಯನ್ ಸಮಾಜದಲ್ಲಿದ್ದ ವಾಸ್ತವತೆಯ ನೆಲೆಯು ಇದೇ ಆಗಿತ್ತು. ಸಮಾಜದಲ್ಲಿದ್ದಂತಹ ಇರುವ ಸಮಸ್ಯೆಗಳನ್ನು ಕಾಲ್ಪನಿಕವಾಗಿ ಚಿತ್ರಿಸಿದೆ ವ್ಯಕ್ತಿಯ ಗೊಂದಲಗಳನ್ನು ಯಥಾವತ್ತಾಗಿ ವ್ಯಕ್ತಪಡಿಸಿರುವರು. ದಾಸ್ತೊಯೆವ್‌ಸ್ಕಿಯ ಪ್ರಾತಿನಿಧಿಕ ಕಾದಂಬರಿಗಳನ್ನು ರಷ್ಯದ ಜನತೆಯುಳ್ಳ ಮತ್ತು ರಷ್ಯದ ಸಮಾಜದ ವಸ್ತುಸ್ಥಿತಿಯನ್ನು ಪ್ರತಿಬಿಂಬಿಸುವುದರಿಂದ ಇವರ ಸೃಜನಶೀಲ ಕೃತಿಗಳನ್ನು 'ರಷ್ಯ ಜೀವನದ ಎನ್‌ಸೈಕ್ಲೋಪೀಡಿಯಾ'ಗಳೆಂದು ಕರೆಯಲಾಗುತ್ತದೆ. ತನ್ನ ಸಮಕಾಲೀನ ಬರಹಗಾರರಿಗಿಂತ ಬದುಕಿನ ಸಂಕಷ್ಟಗಳು, ಮನುಷ್ಯನ ಅಂತರಂಗದಲ್ಲಿ ನಡೆಯುವ ತಳಮಳ, ಪರಿಣಾಮಗಳು ಅದರಿಂದ ಉಂಟಾಗುವ ಮನುಷ್ಯನ ಅಂತಃ ಪರಿವರ್ತನೆ ಮತ್ತು ದುರಂತವನ್ನು ಚಿತ್ರಿಸುವಲ್ಲಿ ವಿಶಿಷ್ಟತೆಯಿಂದ ಕೂಡಿದೆ. ಸಾಮಾಜಿಕ ಚಿಂತನೆ ಮತ್ತು ಸಂವೇದನೆಗಳ ಬರವಣಿಗೆಯು ದಾಸ್ತೊಯೆವ್‌ಸ್ಕಿಯಲ್ಲಿ ಒಳಗೊಂಡಿದೆ.

'ಬಡಜನರು' ಎಂಬ ಕಾದಂಬರಿಯಲ್ಲಿ ಇಬ್ಬರು ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಲು ನಡೆಸುವ ಪತ್ರ ವ್ಯವಹಾರದ ಮೂಲಕ ವಿಚಾರಗಳು ತಿಳಿಯುತ್ತದೆ. ಬಡತನದ ಸ್ಥಿತಿಗೆ ಸಿಲುಕಿದ ಕಾರಕೂನನೊಬ್ಬನ ಸಾಮಾಜಿಕ ದುರಂತದ ವಾಸ್ತವತೆಯ ಚಿತ್ರಣವಿದೆ. ಈ ಕಾದಂಬರಿಯಲ್ಲಿ ವರ್ವಾರ ಅಲೆಕ್ಸೇಯೆವ್ನ ಮತ್ತು ಮಕಾರ್ ಅಲೆಕ್ಸೇಯವಿಚ್ ಇಬ್ಬರ ನಡುವಿನ ಮನಸ್ಸಿನ ಸುಪ್ತ ಭಾವನೆಗಳನ್ನು ಅಭಿವ್ಯಕ್ತಿಸುವ ರೀತಿಯು ತಿಳಿದುಬರುತ್ತದೆ. "ಬಡವನು ಯಾವಾಗಲೂ ಸಂಶಯಗ್ರಸ್ತನಾಗಿರುತ್ತಾನೆ. ತನ್ನ ಮುಂದೆ ಹೋಗುತ್ತಿರುವವರನ್ನೆಲ್ಲ ಸದಾ ಓರೆನೋಟದಿಂದ ನೋಡುತ್ತಲೇ ಇರುತ್ತಾನೆ. ಅವರೆಲ್ಲ ತನ್ನ ಬಗೆಗೆ ಮಾತನಾಡುತ್ತಿದ್ದಾರೆಯೇ, ತನ್ನ ಬಗೆಗೆ ಏನು ಹೇಳುತ್ತಿದ್ದಾರೆ, ಬಹುಶಃ ಎಂಥ ಬಡವ ಈ ಮನುಷ್ಯ ಇವನು ಏನು ಯೋಚನೆ ಮಾಡುತ್ತಿದ್ದಾನೆ? ಈ ಕಡೆಯಿಂದಾಗಲೀ ಆ ಕಡೆಯಿಂದಾಗಲೀ ಎಂಥ ವಿಷಣ್ಣ ವ್ಯಕ್ತಿಯಾಗಿ ಕಾಣಿಸುತ್ತಾನೆ ಎಂದು ಹೇಳುತ್ತಿದ್ದಾರೇನೋ ಎಂದೇ ಭಾವಿಸುತ್ತಾನೆ."[3] ಇಬ್ಬರಲ್ಲಿ ಸದಾ ಕಾಡುವ ಬಡತನದ ಬದುಕಿನ ಭೂತ, ವರ್ತಮಾನ, ಭವಿಷ್ಯತ್ತಿನ ಜೀವನದ ಬಗೆಗೆ ಹೊಂದುವ ದ್ವಂದ್ವದ ಬಗೆಯು ವ್ಯಕ್ತವಾಗುತ್ತದೆ.

ಸೇಂಟ್‌ಪೀಟರ್ಸ್ ಬರ್ಗ್ ಎಂಬ ನಗರವು ವ್ಯಕ್ತಿಯನ್ನು ಆಕರ್ಷಿಸುವ ಮತ್ತು ಬದುಕಿನ ವಿವಿಧ ಮುಖವನ್ನು ಪರಿಚಯಿಸುವ ನಿಟ್ಟಿನಲ್ಲಿ ಗೋಚರವಾಗುತ್ತದೆ. ಬಡಕುಟುಂಬದವರು ನಗರಗಳಿಗೆ ವಲಸೆಬಂದು ಬದುಕನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಮೂಲಭೂತ ಸೌಕಾರ್ಯಗಳಿಂದ ವಂಚಿತರಾಗಿ, ಕೊಳಗೇರಿ ಪ್ರದೇಶದಲ್ಲಿರುವ ವಾತಾವರಣದ ಪರಿಸ್ಥಿತಿ, ಮನಸ್ಸಿಲ್ಲದ ಮನಸ್ಸಿನಿಂದ, ಬೇರೆಯವರ ಒತ್ತಾಯಕ್ಕೆ ಒಳಗಾಗಿ ಮಹಿಳೆಯು ಕೆಟ್ಟ ದಾರಿಗೆ ಒಳಗಾಗುವ, ತಳ್ಳುವ ಕೂಪವಾಗಿ ಕೆಲವೊಮ್ಮೆ ಕಂಡುಬರುತ್ತದೆ. ಹೀಗೆ ದಾಸ್ತೊಯೆವ್‌ಸ್ಕಿಯ ವಾಸ್ತವತೆಯು ರಷ್ಯನ್ ಸಮಾಜದ

ಸಮಸ್ಯೆಗಳನ್ನು ಬಿಂಬಿಸುವುದರ ಜೊತೆಗೆ ಆಧುನಿಕತೆಯು ರಷ್ಯನ್ ಸಮಾಜದ ಮೇಲೆ ಬೀರಿದ ಪ್ರಭಾವವು ವ್ಯಕ್ತಿಯ ಮನುಷ್ಯ ಸಂಬಂಧಗಳಲ್ಲಿ ವ್ಯಕ್ತವಾಗುವ ಅಂಶವನ್ನು ಗುರುತಿಸಲಾಗುತ್ತದೆ.

ರಷ್ಯನ್ ಬರಹಗಾರರಲ್ಲಿ ಮತ್ತೊಬ್ಬರಾದ ಟಾಲ್‌ಸ್ಟಾಯ್‌ರವರ ಕೃತಿಗಳನ್ನು ವಾಸ್ತವತೆಯ ನೆಲೆಯಲ್ಲಿ ಗುರುತಿಸುವಾಗ ಯೂರೋಪಿನ ಕೈಗಾರಿಕರಣದಿಂದ ಉಂಟಾದಂತಹ ರಷ್ಯನ್ ಸಮಾಜದ ಬಾಹ್ಯ ಮತ್ತು ಆಂತರಿಕ ಬದಲಾವಣೆಗಳು ಮನುಷ್ಯನ ಬದುಕಿನಲ್ಲಿ ಉಂಟುಮಾಡಿದ ತಲ್ಲಣಗಳನ್ನು ತಿಳಿಯಲಾಗುತ್ತದೆ. ಟಾಲ್‌ಸ್ಟಾಯ್ ತನ್ನ ಸುತ್ತಲಿನ ಬದುಕಿನ ಬಗ್ಗೆ, ಸಂಗತಿಗಳ ಬಗ್ಗೆ ಕುತೂಹಲವಿತ್ತು. ಬದುಕು ಎಂದರೇನು? ಬದುಕಿನ ಅರ್ಥವೇನು? ಹೇಗೆ ಬದುಕಬೇಕು? ಎಂಬುದರ ಬಗ್ಗೆ ಚಿಂತಿಸುತ್ತಿದ್ದನು. ಬದುಕು ಅಂದರೆ ವಿನೋದದ ಆಟವಲ್ಲ, ಅದೊಂದು ಗಂಭೀರವಾದ ಸಮಸ್ಯೆ ಎಂದುಕೊಂಡವನು. ರೂಸೋನ ವಿಚಾರಗಳು ಟಾಲ್‌ಸ್ಟಾಯ್‌ನ ಮೇಲೆ ಪ್ರಭಾವ ಬೀರಿದರ ಪರಿಣಾಮವಾಗಿ ರೈತ ಮಕ್ಕಳಿಗಾಗಿ ಶಾಲೆಯನ್ನು ತೆರೆಯುವ ನಿರ್ಧಾರವನ್ನು ಕೈಗೊಂಡಿದ್ದನು. ಕವಿಯು ತನ್ನ ಬರವಣಿಗೆಯಲ್ಲಿ 'ಕಲೆ ಕೇವಲ ರಂಜನೆಯ ವಸ್ತುವಲ್ಲ. ಲೋಕದ ಮೋಸ, ವಂಚನೆಗಳ ದೋಷವನ್ನು ತಿದ್ದುವ ರೂಪಕ' ಎಂದು ಹೇಳಿದನು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ತಳಹದಿಯ ಮೇಲೆ ಮಾನವ ಸಮಾಜ ನಿರ್ಮಿತವಾಗಬೇಕು. ಶ್ರೀಮಂತರ ಮತ್ತು ನಿರ್ಗತಿಕರ ನಡುವಿನ ಅಂತರ ಸಂಪೂರ್ಣವಾಗಿ ನಾಶವಾಗಬೇಕು. ಯುದ್ಧಸ್ತಂಭವ, ನಿಶ್ಯಸ್ತ್ರೀಕರಣ, ಸೈನ್ಯ ವಿಸರ್ಜನೆ, ಶೋಷಣೆ ನಿವಾರಣೆ, ಅಹಿಂಸೆ, ಪ್ರೇಮ ಹೀಗೆ ಮೊದಲಾದ ತನ್ನ ವಿಚಾರಗಳ ಮೂಲಕ ಟಾಲ್‌ಸ್ಟಾಯ್ ಪ್ರಭಾವಿಸುತ್ತಿರುವುದನ್ನು ಕಾಣಬಹುದು.

ಟಾಲ್‌ಸ್ಟಾಯ್‌ನ ವಿಚಾರಗಳಿಂದ ಪ್ರಭಾವಿತರಾದ ಮಹಾತ್ಮ ಗಾಂಧೀಜಿ ಈತನನ್ನು "ಮನುಕುಲದ ಗುರು" ಎಂದು ಕರೆದಿರುವರು. ಹೀಗೆ ಟಾಲ್‌ಸ್ಟಾಯ್ ವಿಚಾರಗಳಿಗೂ ಸಮಕಾಲೀನ ವಿಚಾರಗಳು ಹೇಗೆ ಸಾಮ್ಯತೆಯನ್ನು ಪಡೆದಿವೆ ಎಂಬುದನ್ನು ಗುರುತಿಸಲಾಗುತ್ತದೆ. ಟಾಲ್‌ಸ್ಟಾಯ್ ಯಾಸ್ನಯಾ ಪೊಲ್ಯಾನದಲ್ಲಿ ವಾಸ್ತವ್ಯ ಹೂಡಿದ ನಂತರ ರಷ್ಯನ್ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ರೈತರ ಸಂಕಷ್ಟಗಳನ್ನು ಬಗೆಹರಿಸಲು ತೊಡಗುತ್ತಾರೆ. ಸಮಾಜದಲ್ಲಿದ್ದಂತಹ ಶೋಷಣೆಯ ಕಂಡು ಬೇಸತ್ತು ದೂರದ ಪಯಣದಲ್ಲಿ ಸಾಗಬೇಕೆಂಬ ನಿರ್ಧಾರವನ್ನು ಮಾಡುತ್ತಾರೆ. ತಮ್ಮ ಪತ್ನಿಗೆ ಬರೆದಿಟ್ಟ ಬೀಳ್ಕೋಡುಗೆ ಪತ್ರದಲ್ಲಿ ತಾವೇಕೆ ಹಾಗೆ ಮನೆ ಬಿಡುತ್ತಿರುವನೆಂಬುದಕ್ಕೆ ಕಾರಣ ವಿವರಿಸುತ್ತಾ ಹೀಗೆ ತಿಳಿಸಿದ್ದಾರೆ "ನಾನು ಹೊರಡುತ್ತಿರುವುದು ನಿನಗೆ ನೋವು ತರುತ್ತದೆ ಅದಕ್ಕಾಗಿ ನಾನು ವಿಷಾಧಿಸುತ್ತೇನೆ. ಆದರೆ ಬೇರೆನನ್ನು ಮಾಡುವ ಸ್ಥಿತಿಯಲ್ಲಿ ನಾನಿಲ್ಲ ಎಂಬುದನ್ನು ನೀನು ಅರ್ಥ ಮಾಡಿಕೊಂಡು ನಂಬುತ್ತಿ ಎಂದು ತಿಳಿದಿದ್ದೇನೆ. ಮನೆಯಲ್ಲಿ ನನ್ನ ಪರಿಸ್ಥಿತಿ ಸಹಿಸಲಸಾಧ್ಯವಾಗುತ್ತಿದೆ. ಹಾಗೆಯೇ ಆಗಿದೆ. ಇನ್ನಿತರ ವಿಷಯಗಳಿರಲಿ ನಾನು ಈಗ ಜೀವಿಸಿರುವಂತೆ ಶ್ರೀಮಂತಿಕೆಯ ಅದ್ದೂರಿಯಲ್ಲಿ ನಾನು ಬದುಕಲಾರೆ. ನನ್ನ ವಯೋಮಾನದ ಇನ್ನಿತರ ವಯಸ್ಸಾದ ಜನ ಸಾಮಾನ್ಯವಾಗಿ ಮಾಡುವಂತೆಯೇ ನಾನೂ ಮಾಡುತ್ತಿದ್ದೇನೆ. ಈ ಮೃಣ್ಮಯ ಜೀವನದಿಂದ ದೂರ ಸರಿದು ತಮ್ಮ ಕಡೆಯ ದಿನಗಳನ್ನು ಏಕಾಂತವಾಗಿ, ಶಾಂತವಾಗಿ ಕಳೆಯುವುದು"[4] ಎಂದು ಹೇಳಿದ್ದಾರೆ.

ಟಾಲ್‌ಸ್ಟಾಯ್ ಆಧುನಿಕತೆಯು ವ್ಯಕ್ತಿಯ ಬದುಕಿನಲ್ಲಿ ಉಂಟುಮಾಡಿದ ಪ್ರಭಾವವನ್ನು ತಿಳಿಸುವುದರ ಜೊತೆಗೆ ಕುಟುಂಬದ ಸೌಖ್ಯವಿರುವುದು ಉತ್ತಮ ಬಾಂಧವ್ಯದಲ್ಲಿ ಎಂದು ಬಿಂಬಿಸಿರುವರು. ಪೀಟರ್‌ಬರ್ಗ್ಸ್, ಮಾಸ್ಕೊ ಎಂಬ ನಗರವು ವ್ಯಕ್ತಿಯನ್ನು ಮನರಂಜನೆ, ಉದ್ಯೋಗ, ಗೌರವ, ಪ್ರತಿಷ್ಠೆಯ

ಹೆಸರಿನಲ್ಲಿ ಹೇಗೆ ದುರಂತಕ್ಕೆ ತಳ್ಳುತ್ತಿವೆ ಎಂದು ತಿಳಿಯಲಾಗುತ್ತದೆ. ಉದಾಹರಣೆಗೆ: "ಪುನರುತ್ಥಾನ" ಕಾದಂಬರಿಯಲ್ಲಿ ನೆಖ್ಲುದೊವ್‌ನಿಂದ ವಂಚಿತಳಾದ ಕತೂಶಾ ಮಾಸ್ಲೊವ್ ತನ್ನ ಬದುಕಿನ ಏರಿಳಿತಗಳಲ್ಲಿ ಅನುಭವಿಸಿದ ಸಂಕಷ್ಟಗಳು ಮತ್ತು ತಾನು ಮಾಡದ ತಪ್ಪಿಗೆ ಅನುಭವಿಸುವ ಸೈಬಿರಿಯಾದ ಸೆರೆಮನೆ ವಾಸ, ಈಕೆಯ ಪರವಾಗಿ ನ್ಯಾಯ ತೀರ್ಪನ್ನು ಕೊಡುವ ನಿರ್ಣಯ ಕಾಲನಂತರ ನೆಖ್ಲುದೊವ್ಗೆ ಒದಗಿದಾಗ ಈತ ಆತ್ಮ ಶುದ್ಧೀಕರಣದ ಚಿಂತನೆಗೆ ಒಳಗಾಗುವುದು ಕಂಡುಬರುತ್ತದೆ. ನೆಖ್ಲುದೊವ ಶ್ರೀಮಂತ ವರ್ಗಕ್ಕೆ ಸೇರಿದವನಾಗಿದ್ದು ತನ್ನ ಪಾಲಿಗೊದಗಿದ ಆಸ್ತಿಯನ್ನು ಬಡ ಜನರಿಗೆ ಹಂಚುವ ನಿರ್ಧಾರ ಮಾಡುವುದು. ಈ ಕಾದಂಬರಿಯಲ್ಲಿ ಹೆಣ್ಣಿನ ಅಸಹಾಯಕತೆಯು ಎಷ್ಟರ ಮಟ್ಟಿಗೆ ಅವಳ ದುರಂತದ ಕಡೆಗೆ ಹೊಯ್ಯುತ್ತದೆ ಎಂಬುದನ್ನು ಗಮನಿಸಬಹುದು. ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಎದುರಾದ ಸವಾಲುಗಳನ್ನು ಸಮಸ್ಯೆಗಳ ರೂಪದಲ್ಲಿ ಕಸೂತಾ ಮಾಸ್ಲೊವಾ ಒಳಗಾಗುವುದನ್ನು ಗುರುತಿಸಲಾಗಿದೆ. ಹೊಸ ಬದುಕಿನ ಹುಡುಕಾಟವು ನೀತಿ ಬೋಧನೆಯ ವಿಚಾರಗಳು ನ್ಯಾಯಾಲಯ, ಕಾನೂನು, ಕೈದಿಗಳ ಬಗ್ಗೆ ಚರ್ಚಿಸುತ್ತ ಮನುಷ್ಯನು ತನ್ನ ತಪ್ಪಿನ ಅರಿವಿನಿಂದ ಕ್ಷಮೆಯಾಚಿಸುತ್ತಾ ತನ್ನ ಬದುಕನ್ನು ಉತ್ತಮಪಡಿಸಿಕೊಳ್ಳುವ ಸಂಗತಿಗಳನ್ನು ಗಮನಿಸಬಹುದಾಗಿದೆ. ಈ ಕಾದಂಬರಿಯಲ್ಲಿ ಮಾಂತ್ಲೊವಾಳ ಬದುಕಿನಲ್ಲಿ ಜರುಗಿದ ತಿರುವುಗಳು, ಆಯ್ಕೆ ಮಾಡಿಕೊಂಡ ಜೀವನ ಶೈಲಿ ಅದರಿಂದ ಉಂಟಾದ ತೊಡಕು, ಇದರಿಂದ ಹೊರಬರಲು ಸಾಧ್ಯವಾಗದೇ ಇರುವಾಗ ತೀರ್ಮಾನಿಸಿಕೊಂಡ ನಿರ್ಧಾರ, ಕೊನೆಗೆ ಅನುಭವಿಸುವ ಶಿಕ್ಷೆ ಕಂಡುಬರುತ್ತದೆ.

ಮಾಂತ್ಲೊವಾಳ ದುಸ್ಥಿತಿಗೆ ಕಾರಣನಾದ ನೆಕ್ಲೂದೊವ್ ಜ್ಯೂರಿಯಾಗಿದ್ದು ಅವಳನ್ನು ಕಂಡು ಪ್ರಾಯಶ್ಚಿತಗೊಂಡು ಆಕೆಯನ್ನು ವಿವಾಹವಾಗಲು ನಿರ್ಧಾರಿಸಿದಾಗ ಆಕೆ ತನ್ನಂತೆಯೇ ಶಿಕ್ಷೆ ಅನುಭವಿಸಿದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡದ್ದು. ಹೀಗೆ ಆಧುನೀಕರಣಗೊಂಡ ರಷ್ಯನ್ ಸಮಾಜದ ಪುರುಷ ವರ್ಗ ಹೆಣ್ಣನ್ನು ಕಾಣುವ ದೃಷ್ಟಿಕೋನ, ಆಕೆಯನ್ನು ಪಡೆಯುವ ಹಂಬಲಗಳು ವ್ಯಕ್ತವಾಗುತ್ತದೆ. ರಷ್ಯನ್ ಸಮಾಜದ ಮೇಲೆ ಆಧುನಿಕತೆಯ ಪ್ರಭಾವವು ಉಂಟಾದದ್ದು ಯೂರೋಪಿನ ಕೈಗಾರೀಕರಣದ ಮೂಲಕ. ಈ ಪರಿಣಾಮದಿಂದ ವ್ಯಕ್ತಿಯ ಬಾಹ್ಯ ಮತ್ತು ಆಂತರಿಕ ನಡಾವಳಿಕೆಗಳಲ್ಲಿ ಬದಲಾವಣೆಗಳು ಉಂಟಾದವು. ರಷ್ಯನ್ ಬರಹಗಾರರಾದ ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್‌ರವರು ತಮ್ಮ ಸೃಜನಶೀಲ ಬರವಣಿಗೆ ಮೂಲಕ ವಾಸ್ತವಿಕತೆಯ ಅಂಶಗಳನ್ನು ತಿಳಿಸಿದರು. ವರ್ಗ ಸಂಘರ್ಷ, ರಷ್ಯದ ಭೂ ವ್ಯವಸ್ಥೆ, ಕೈಗಾರಿಕರಣ, ಸೇಂಟ್ ಪೀಟರ್ಸ್ ಬರ್ಗ್‌ನ ಚಿತ್ರಣ, ಸೈಬಿರೀಯನ್ ಸೆರೆಮನೆ ವಾಸ ಮತ್ತು ಶಿಕ್ಷೆ ಹೀಗೆ ರಷ್ಯನ್ ಸಾಹಿತ್ಯದಲ್ಲಿ ವಾಸ್ತವಿಕತೆಯ ನೆಲೆಯನ್ನು ಸಮಕಾಲೀನ ಬರಹಗಾರರಲ್ಲಿ ವ್ಯಕ್ತವಾದ ಭಿನ್ನ ನೆಲೆಯನ್ನು ತೌಲನಿಕವಾಗಿ ಗ್ರಹಿಸಲಾಗುತ್ತದೆ.

ರಷ್ಯನ್ ಸಮಾಜದಲ್ಲಿ ಇದ್ದಂತಹ ಸಾಮಾಜಿಕ ಸಮಸ್ಯೆಗಳನ್ನು, ರಷ್ಯನ್ ಸಮಾಜದ ಮನಸ್ಥಿತಿಯನ್ನು ತಮ್ಮ ಬರವಣಿಗೆಯಲ್ಲಿ ಬಿಂಬಿಸಿದ ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್ ಝಾರ್ ನಿರಂಕುಶ ಪ್ರಭುತ್ವ, ಜೀತಪದ್ಧತಿ, ದಬ್ಬಾಳಿಕೆ, ಚರ್ಚ್‌ನಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದಂತಹ ಮೂಢನಂಬಿಕೆ, ಉಳ್ಳವರ ಮಾತಿಗೆ ವಿರುದ್ಧವಾಗಿ ನಡೆದುಕೊಂಡಾಗ ವಿಧಿಸುತ್ತಿದ್ದಂತಹ ಸೈಬೀರಿಯಾದ ಗಡೀಪಾರು ಶಿಕ್ಷೆ, ಯೂರೋಪ್ ಮತ್ತು ರಷ್ಯದ ಸಮಸ್ಯೆಗಳು ಹೀಗೆ ಹಲವು ಸಾಮಾಜಿಕ ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ.

ರಷ್ಯನ್ ಸಮಾಜದಲ್ಲಿದ್ದಂತಹ ಕುಟುಂಬದ ಜೀವನದ ಚೌಕಟ್ಟು ಮತ್ತು ಆಧುನಿಕತೆಗೆ ಒಳಗಾದ ಮನುಷ್ಯನ ಸಂಬಂಧಗಳಲ್ಲಿನ ಸಂಘರ್ಷವು ಹೇಗೆ ವ್ಯಕ್ತವಾಗಿರುವುದು ಎಂದು ಗುರುತಿಸಲಾಗುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ದಾಸ್ತೊಯೆವ್‌ಸ್ಕಿ ಮತ್ತು ಟಾಲ್‌ಸ್ಟಾಯ್‌ರವರು ಸಮಕಾಲೀನ ರಷ್ಯನ್ ಬರಹಗಾರರಾಗಿದ್ದು ಒಂದೇ ಕಾಲಘಟ್ಟದ ವಸ್ತುಸ್ಥಿತಿಯನ್ನು ವ್ಯಕ್ತಪಡಿಸುವಲ್ಲಿ ಭಿನ್ನತೆಯಿದೆ. ವ್ಯಕ್ತಿಯ ಬಾಹ್ಯ ಮತ್ತು ಆಂತರಿಕ ಶೋಧನೆಯು ರಷ್ಯನ್ ಸಾಹಿತ್ಯದ ವಾಸ್ತವತೆಯ ನೆಲೆಯಲ್ಲಿವೆ. ಈ ಹಿನ್ನೆಲೆಯಲ್ಲಿ ರಷ್ಯನ್ ಸಮಾಜದಲ್ಲಿದ್ದಂತಹ ಝಾರ್ ಪ್ರಭುತ್ವ, ಜೀತಪದ್ಧತಿ, ಭೂಮಾಲೀಕರ ಶೋಷಣೆ, ರೈತರ ಸಂಕಷ್ಟಗಳು, ವರ್ಗ ಸಂಘರ್ಷ, ಆಧುನಿಕತೆಯ ಪ್ರಭಾವವನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಕುಟುಂಬದಲ್ಲಿಯೇ ಜಮೀನ್ದಾರರ ಬದುಕಿನ ಕ್ರಮ ಮತ್ತು ರೈತರ ದುಡಿತದ ಬಗೆಗೆ ಗ್ರಹಿಸಿದ ವಿಚಾರಗಳನ್ನು ಹಾಗೂ ರಷ್ಯನ್ ಸಮಾಜದಲ್ಲಿ 19ನೇ ಶತಮಾನದಲ್ಲಿದ್ದಂತಹ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು, ಬಿಕ್ಕಟ್ಟುಗಳು ಹೇಗೆ ಸಂಘರ್ಷಕ್ಕೆ ಒಳಗಾಗುತ್ತಿದ್ದವು ಎಂದು ಇವರ ಸಾಹಿತ್ಯದ ಬರವಣಿಗೆಯಲ್ಲಿ ಕಾಣಲಾಗುತ್ತದೆ. ಇದರ ಜೊತೆಗೆ ಬಡತನ, ವ್ಯಕ್ತಿಯ ಆಂತರಿಕ ತೊಳಲಾಟ, ಪಾಪಪ್ರಜ್ಞೆ ಹಾಗೂ ಆಧುನಿಕತೆಯ ದುರಂತದ ಬಗೆಗೆ ಹೇಳುತ್ತ ಸಾಂಪ್ರದಾಯಿಕ ಕೌಟುಂಬಿಕ ಜೀವನದ ಚೌಕಟ್ಟಿನ ಬಗೆಗೂ ತಿಳಿಸುತ್ತಾರೆ. ರಷ್ಯದಲ್ಲಿ ಯೂರೋಪಿನ ಕೈಗಾರಿಕರಣದಿಂದ ಉಂಟಾದ ಕಮ್ಯೂನಿಸಂ, ಸಮಾಜವಾದ, ಉದಾರವಾದಿ ನಿಲುವುಗಳು ರಷ್ಯನ್ ಸಾಹಿತ್ಯದಲ್ಲಿ ವಾಸ್ತವತಾವಾದದ ನೆಲೆಯಲ್ಲಿ ಕಾದಂಬರಿಯಲ್ಲಿ ವ್ಯಕ್ತವಾಗುತ್ತಿದ್ದವು. ಒಂದು ಹೊಸ ಬದುಕು ಮತ್ತು ನೋಟ ಕ್ರಮದ ಚಿಂತನೆಯು ರಷ್ಯದಲ್ಲಿ ಮೂಡಿ ಕ್ರಾಂತಿಯ ರೂಪದಲ್ಲಿ ಹೊಸ ಅಂದೋಲನವನ್ನು ಸೃಷ್ಟಿಮಾಡಿತು.

**ಕೊನೆ ಟಿಪ್ಪಣಿ**

---

1. ಕೇಶವಶರ್ಮ.ಕೆ. (2013). ಮಾರ್ಕ್ಸ್‌ವಾದಿ ಪರಿಕಲ್ಪನೆಗಳು. ಪುಸ್ತಕ ಪ್ರಕಾಶನ, ಬೆಂಗಳೂರು. ಪುಟ ಸಂಖ್ಯೆ 231.
2. ಅಶೋಕ. ಟಿ.ಪಿ. (1999). ವಾಸ್ತವತಾವಾದ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪು.ಸಂ.20.
3. ಗೋಪಾಲಕೃಷ್ಣರಾವ್. ಕೆ.ಎಲ್. (1983). ಫ್ಯೋದರ್ ದಸ್ತಯೇವ್‌ಸ್ಕಿ ನೀಳ್ಗತೆಗಳು. ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು. ಪು.ಸಂ.142.
4. ನಾಗರಾಜರಾವ್. ಹ.ವೆಂ. (1991). ಯಾಸ್ನಯ ಪಲ್ಯಾನ(ಲೆವ್ ತೊಲ್‌ಸ್ತೋಯ್ ತಪದ ಮನೆ). ಪದ್ಮ–ಪ್ರಜ್ಞಾ ಪ್ರಕಾಶನ, ಬೆಂಗಳೂರು. ಪು.ಸಂ.49.

**ಪರಾಮರ್ಶನ ಗ್ರಂಥಗಳು**


- ಅಶೋಕ. ಟಿ.ಪಿ. (1999). ವಾಸ್ತವತಾವಾದ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಅಂಗಡಿ. ಎಂ.ಎಸ್. (1984). ಅಪರಾಧ ಮತ್ತು ಶಿಕ್ಷೆ. ಪ್ರಸಾರಾಂಗ ಮೈ.ವಿ.ವಿ., ಮೈಸೂರು.

- ದೇ. ಜವರೇಗೌಡ. (1965). ಪುನರುತ್ಥಾನ, ಶಾರದಾ ಮಂದಿರ, ಮೈಸೂರು.
- ಗೋಪಾಲಕೃಷ್ಣರಾವ್. ಕೆ.ಎಲ್. (1983). ಫ್ಯೋದರ್ ದಸ್ತಯೇವ್‌ಸ್ಕಿ ನೀಳ್ಗತೆಗಳು. ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
- ಕೇಶವಶರ್ಮ.ಕೆ. (2013). ಮಾರ್ಕ್ಸ್‌ವಾದಿ ಪರಿಕಲ್ಪನೆಗಳು. ಪುಸ್ತಕ ಪ್ರಕಾಶನ, ಬೆಂಗಳೂರು.
- ನಾಗರಾಜರಾವ್. ಹ.ವೆಂ. (1991). ಯಾಸ್ನಯ ಪಲ್ಯಾನ(ಲೆವ್ ತೊಲ್‌ಸ್ತೋಯ್ ತಪದ ಮನೆ). ಪದ್ಮ–ಪ್ರಜ್ಞಾ ಪ್ರಕಾಶನ, ಬೆಂಗಳೂರು.
- ಶರ್ಮ. ತಿ.ತಾ. (1978). ರಷ್ಯನ್ ಸಾಹಿತ್ಯ ಪರಿಚಯ. ಪ್ರಸಾರಾಂಗ ಬೆಂ.ವಿ.ವಿ, ಬೆಂಗಳೂರು.
- ಟಾಲ್‌ಸ್ಟಾಯ್ ವಿಚಾರಧಾರೆ. (1973). ಜನ್ಮಭೂಮಿ ಟ್ರಸ್ಟ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂ.ವಿ.ವಿ, ಬೆಂಗಳೂರು.